# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1142** |
| ಸದಸ್ಯರ ಹೆಸರು | : | ಡಾ|| ಎಂ.ಜಿ ಮುಳೆ<br>(ವಿಧಾನಸಭೆಯಿಂದ ಚುನಾಯಿರಾದವರು) |
| ಉತ್ತರಿಸುವ ದಿನಾಂಕ | : | 13-03-2026 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೀದರ್ ಜಿಲ್ಲೆಯಲ್ಲಿ 2023-24 ಮತ್ತು 2024-25ನೇ ಸಾಲಿನಲ್ಲಿ ಸಂರಕ್ಷಣೆ ಪೋರ್ಟಲ್ ಅಡಿಯಲ್ಲಿ ಬೆಳೆ ವಿಮೆಗೆ ನೋಂದಾಯಿಸಿಕೊಂಡ ರೈತರ ಸಂಖ್ಯೆ ಎಷ್ಟು ಮತ್ತು ರೈತರಿಂದ ಹಾಗೂ ಸರ್ಕಾರದಿಂದ ಪಾವತಿಯಾದ ಒಟ್ಟು ಪ್ರೀಮಿಯಂ ಮೊತ್ತವೆಷ್ಟು; (ಹಂಗಾಮುವಾರು ಮಾಹಿತಿ ನೀಡುವುದು)</td><td>ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (KRS PMFBY) ಯೋಜನೆಯಡಿ ಬೀದರ್ ಜಿಲ್ಲೆಯಲ್ಲಿ 2023-24 ಮತ್ತು 2024-25ನೇ ಸಾಲಿನಲ್ಲಿ ಬೆಳೆ ವಿಮೆಗೆ ನೋಂದಾಯಿಸಿಕೊಂಡ ರೈತರ ಸಂಖ್ಯೆ, ರೈತರಿಂದ ಹಾಗೂ ಸರ್ಕಾರದಿಂದ ಪಾವತಿಯಾದ ಪ್ರೀಮಿಯಂ ಮೊತ್ತದ ಹಂಗಾಮುವಾರು ವಿವರ ಈ ಕೆಳಕಂಡಂತಿದೆ.<br>(ಮೊತ್ತ ರೂ.ಲಕ್ಷಗಳಲ್ಲಿ)
<table>
<tr><th>ವರ್ಷ/ಹಂಗಾಮು</th><th>ನೋಂದಾಯಿಸಿದ ರೈತ ಪ್ರಸ್ತಾವನೆಗಳ ಸಂಖ್ಯೆ</th><th>ರೈತರು ಪಾವತಿಸಿದ ಪ್ರೀಮಿಯಂ ಮೊತ್ತ</th><th>ರಾಜ್ಯ ಸರ್ಕಾರದ ಪ್ರೀಮಿಯಂ ಮೊತ್ತ</th><th>ಕೇಂದ್ರ ಸರ್ಕಾರದ ಪ್ರೀಮಿಯಂ ಮೊತ್ತ</th><th>ಒಟ್ಟು ಪ್ರೀಮಿಯಂ ಮೊತ್ತ</th></tr>
<tr><td>2023 ಮುಂಗಾರು</td><td>256402</td><td>1373.66</td><td>7109.04</td><td>7109.04</td><td>15591.73</td></tr>
<tr><td>2023-24 ಹಿಂಗಾರು</td><td>7814</td><td>30.35</td><td>87.55</td><td>87.55</td><td>205.45</td></tr>
<tr><td>ಒಟ್ಟು</td><td>264216</td><td>1404.01</td><td>7196.59</td><td>7196.59</td><td>15797.18</td></tr>
<tr><td>2024 ಮುಂಗಾರು</td><td>195803</td><td>958.73</td><td>2265.01</td><td>2265.01</td><td>5488.76</td></tr>
<tr><td>2024-25 ಹಿಂಗಾರು</td><td>29</td><td>2.28</td><td>0.00</td><td>0.00</td><td>2.28</td></tr>
<tr><td>ಒಟ್ಟು</td><td>198755</td><td>971.00</td><td>2265.01</td><td>2265.01</td><td>5501.03</td></tr>
</table>
</td></tr>
<tr><td>ಆ)</td><td>ಕಳೆದ ಎರಡು ವರ್ಷಗಳಲ್ಲಿ ಅತಿವೃಷ್ಟಿ ಹಾಗೂ ಬರಗಾಲದಿಂದಾಗಿ ಬೆಳೆ ಹಾನಿಗೊಳಗಾಗಿ ಪರಿಹಾರಕ್ಕಾಗಿ ಸಲ್ಲಿಕೆಯಾದ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಎಷ್ಟು ಅರ್ಜಿಗಳನ್ನು ವಿಮಾ</td><td>KRS PMFBY ಯೋಜನೆಯಡಿ ಕಳೆದ ಎರಡು ವರ್ಷಗಳಲ್ಲಿ ಅತಿವೃಷ್ಟಿಯಿಂದ ಬೆಳೆ ಹಾನಿಗೊಳಗಾಗಿ ಬೆಳೆ ವಿಮೆ ಪರಿಹಾರಕ್ಕಾಗಿ ಬೆಳೆ ವಿಮೆ ಯೋಜನೆಯಡಿ ನೋಂದಣಿಯಾದ ರೈತರಿಂದ ಒಟ್ಟು 35,605 ಅರ್ಜಿಗಳು ಸಲ್ಲಿಕೆಯಾಗಿರುತ್ತದೆ.<br><br>ಸ್ಥಳ ನಿರ್ದಿಷ್ಟ ಪ್ರಕೃತಿ ವಿಕೋಪದಡಿ (Localized Calamity) ಒಟ್ಟು 33,723 ಮತ್ತು ಕೊಯ್ಲೋತ್ತರ ಬೆಳೆ ನಷ್ಟದಡಿ (Post-Harvest losses) ಒಟ್ಟು 1,882 ರೈತ</td></tr>
</table>

| | | |
|---|---|---|
| | ಕಂಪನಿಗಳು ಪುರಸ್ಕರಿಸಿವೆ ಮತ್ತು ಎಷ್ಟು ಅರ್ಜಿಗಳನ್ನು ತಿರಸ್ಕರಿಸಿವೆ; (ತಿರಸ್ಕರಿಸಲು ನೀಡಲಾಗದ ತಾಂತ್ರಿಕ ಕಾರಣಗಳ ವಿವರ ನೀಡುವುದು) | ಪ್ರಕರಣಗಳ ಅರ್ಜಿಗಳು ಸಲ್ಲಿಕೆಯಾಗಿದ್ದು, ಯೋಜನೆಯ ಮಾರ್ಗಸೂಚಿನ್ವಯ ಒಟ್ಟು 35,605 ರೈತ ಪ್ರಕರಣಗಳ ಅರ್ಜಿಗಳಿಗೆ ರೂ.19.48 ಕೋಟಿಗಳ ಬೆಳೆ ವಿಮೆ ಪರಿಹಾರ ಮೊತ್ತವನ್ನು ವಿಮಾ ಸಂಸ್ಥೆಯವರಿಂದ ಇತ್ಯರ್ಥಪಡಿಸಲಾಗಿರುತ್ತದೆ.<br><br>ಮುಂದುವರೆದು, ಬೆಳೆ ಕಟಾವು ಪ್ರಯೋಗಗಳ ಅಂತಿಮ ಇಳುವರಿ ಆಧಾರದ ಮೇಲೆ ಲೆಕ್ಕಾಚಾರ ಮಾಡಲಾದ ಬೆಳೆ ವಿಮೆ ಪರಿಹಾರ ಮೊತ್ತ ಒಳಗೊಂಡಂತೆ ಒಟ್ಟು 1,47,231 ಅರ್ಹ ರೈತ ಫಲಾನುಭವಿ ಪ್ರಕರಣಗಳಿಗೆ ಒಟ್ಟು ರೂ.6835.66 ಲಕ್ಷಗಳ ಬೆಳೆ ವಿಮೆ ಪರಿಹಾರ ಮೊತ್ತವು ಮಂಜೂರಾಗಿರುತ್ತದೆ. |
| ಇ) | ಬೀದರ್ ಜಿಲ್ಲೆಯಲ್ಲಿ ಸಾವಿರಾರು ರೈತರ ಬೆಳೆ ವಿಮೆ ಹಣ ಇನ್ನೂ ವಿಮಾ ಕಂಪನಿಗಳಲ್ಲೇ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ವಿಮಾ ಪರಿಹಾರ ಪಾವತಿಸಲು ವಿಮಾ ಕಂಪನಿಗಳ ವಿಧಿಸಿರುವ ಕಾಲಮಿತಿ ಎಷ್ಟು ಮತ್ತು ವಿಳಂಬ ಮಾಡುತ್ತಿರುವ ಕಂಪನಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಬೀದರ್ ಜಿಲ್ಲೆಯಲ್ಲಿ 2023-24 ಮತ್ತು 2024-25ನೇ ಸಾಲಿನಲ್ಲಿ ಒಟ್ಟು 1,47,231 ಅರ್ಹ ರೈತ ಫಲಾನುಭವಿ ಪ್ರಕರಣಗಳಿಗೆ ಒಟ್ಟು ರೂ.6835.66 ಲಕ್ಷಗಳ ಬೆಳೆ ವಿಮೆ ಪರಿಹಾರ ಮೊತ್ತವು ಮಂಜೂರಾಗಿರುತ್ತದೆ. ಸದರಿ ಮೊತ್ತದಲ್ಲಿ ಒಟ್ಟು ರೂ.6822.80 ಲಕ್ಷಗಳ ಬೆಳೆ ವಿಮೆ ಪರಿಹಾರ ಮೊತ್ತವನ್ನು ಒಟ್ಟು 1,46,860 ಅರ್ಹ ರೈತ ಫಲಾನುಭವಿ ಪ್ರಕರಣಗಳಿಗೆ ವಿಮಾ ಸಂಸ್ಥೆಯವರಿಂದ ಇತ್ಯರ್ಥಪಡಿಸಲಾಗಿರುತ್ತದೆ. ಉಳಿದ ಒಟ್ಟು 371 ಅರ್ಹ ರೈತ ಫಲಾನುಭವಿ ಪ್ರಕರಣಗಳಿಗೆ ಒಟ್ಟು ರೂ.12.86 ಲಕ್ಷಗಳ ಬೆಳೆ ವಿಮೆ ಪರಿಹಾರ ಮೊತ್ತವು ರೈತರ ಬ್ಯಾಂಕ್ ಖಾತೆಗಳಲ್ಲಿನ ನ್ಯೂನತೆಗಳ ಕಾರಣ ಬೌನ್ಸ್ ಬ್ಯಾಕ್ ಆಗಿರುತ್ತದೆ.<br>ರೈತರ ಬ್ಯಾಂಕ್ ಖಾತೆಯಲ್ಲಿ ನ್ಯೂನತೆಗಳಿಂದ ಬೆಳೆ ವಿಮೆ ಪರಿಹಾರ ಮೊತ್ತವು ಇತ್ಯರ್ಥವಾಗದೆ ಬಾಕಿ ಇರುವುದರಿಂದ ವಿಮಾ ಸಂಸ್ಥೆಯವರ ವಿರುದ್ಧ ಕ್ರಮ ಕೈಗೊಳ್ಳಲು ಅವಕಾಶವಿರುವುದಿಲ್ಲ. ರೈತರ ಬ್ಯಾಂಕ್ ಖಾತೆಯ ನ್ಯೂನತೆಗಳು ಸರಿಯಾದ ನಂತರ ಬೆಳೆ ವಿಮೆ ಪರಿಹಾರ ಮೊತ್ತವನ್ನು ವಿಮಾ ಸಂಸ್ಥೆಯವರಿಂದ ಇತ್ಯರ್ಥಪಡಿಸಲಾಗುತ್ತಿದೆ. |
| ಈ) | ಬೆಳೆ ಕಟಾವು ಪ್ರಯೋಗಗಳ ವರದಿ ವಿಳಂಬದಿಂದಾಗಿ ರೈತರಿಗೆ ಪರಿಹಾರ ಸಿಗುತ್ತಿಲ್ಲ ಎಂಬ ದೂರುಗಳಿವೆಯೇ; ಹಾಗಿದ್ದಲ್ಲಿ, ಈ ಪ್ರಕ್ರಿಯೆಯನ್ನು ಪಾರದರ್ಶಕಗೊಳಿಸಲು | ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆಯಡಿ (PMFBY) ಬೀದರ್ ಜಿಲ್ಲೆಯಿಂದ ಬೆಳೆ ಕಟಾವು ಪ್ರಯೋಗಗಳ ವರದಿ ವಿಳಂಬದಿಂದಾಗಿ ರೈತರಿಗೆ ಪರಿಹಾರ ಸಿಗುತ್ತಿಲ್ಲ ಎಂಬ ಬಗ್ಗೆ ಈವರೆಗೂ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ. |

| | | |
|---|---|---|
| | ಮತ್ತು ಶೀಘ್ರವಾಗಿ ವರದಿ ಸಲ್ಲಿಸಲು ಸರ್ಕಾರ ಕೈಗೊಂಡಿರುವ ಸುಧಾರಣೆಗಳೇನು; | |
| ಉ) | ಬೆಳೆ ಹಾನಿಯಾದ 72 ಗಂಟೆಗಳ ಒಳಗೆ ಮಾಹಿತಿ ನೀಡಲು ಗ್ರಾಮೀಣ ಭಾಗದ ರೈತರಿಗೆ ತಾಂತ್ರಿಕ ಅಡಚಣೆಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ನಿಯಮವನ್ನು ಸರಳಗೊಳಿಸುವ ಅಥವಾ ರೈತ ಸಂಪರ್ಕ ಕೇಂದ್ರಗಳ ಮೂಲಕವೇ ನೇರ ನೋಂದಣಿಗೆ ಅವಕಾಶ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? | ಸದರಿ ಯೋಜನೆಯಡಿ ಅತಿವೃಷ್ಟಿಯಿಂದ ಬೆಳೆಯು ಹಾನಿಯಾದಲ್ಲಿ ಬೆಳೆ ವಿಮೆಗೆ ನೋಂದಣಿಯಾದ ರೈತರು ಅನುಷ್ಠಾನ ವಿಮಾ ಸಂಸ್ಥೆಯ Toll free ಸಂಖ್ಯೆಗೆ ಕರೆ ಮಾಡಿ ಘಟನೆ ಸಂಭವಿಸಿದ 72 ಗಂಟೆಗಳೊಳಗೆ ದೂರು (intimation) ಸಲ್ಲಿಸಬೇಕಾಗಿರುತ್ತದೆ.<br>ಬೆಳೆ ಹಾನಿಯಾಗಿರುವ ಕುರಿತು ವರದಿ ನೀಡಲು ರೈತರು ವಿಮಾ ಸಂಸ್ಥೆ ರವರನ್ನು ಸಂಪರ್ಕಿಸಲು ಸಾಧ್ಯವಾಗದ ಸಂಧರ್ಭಗಳಲ್ಲಿ, ಬೆಳೆ ವಿಮಾ ಕಂತು ತುಂಬಿದ ಬ್ಯಾಂಕ್ ಶಾಖೆಯಲ್ಲಿ ಅಥವಾ ಸ್ಥಳೀಯ ಕೃಷಿ ಇಲಾಖೆ ಕಛೇರಿಗೆ ಭೇಟಿ ನೀಡಿ ಬೆಳೆ ಹಾನಿಯಾಗಿರುವ ಕುರಿತು initimation/ದೂರು ಸಲ್ಲಿಸಲು ಅವಕಾಶವಿರುತ್ತದೆ. ತದನಂತರ ಸದರಿ initimation/ದೂರುಗಳನ್ನು ಬ್ಯಾಂಕ್ ಶಾಖೆಯಿಂದ ಅಥವಾ ಸ್ಥಳೀಯ ಕೃಷಿ ಇಲಾಖೆ ಕಛೇರಿಯಿಂದ ಸಂಬಂಧಪಟ್ಟ ವಿಮಾ ಸಂಸ್ಥೆಯವರಿಗೆ 48 ಗಂಟೆಗಳೊಳಗೆ ರವಾನಿಸಲು ಯೋಜನೆಯ ಮಾರ್ಗಸೂಚಿಯನ್ವಯ ಅವಕಾಶವಿರುತ್ತದೆ. ದೂರುಗಳು ಸ್ವೀಕರಿಸಿದ್ದಲ್ಲಿ ಮಾರ್ಗಸೂಚಿಯನುಸಾರ ಕ್ರಮಕ್ಕೆಗೊಳ್ಳಲಾಗುತ್ತದೆ. |

*ಕೃ ಇ 74 ಎಂಎಸ್ 2026*

(ಎಸ್. ಚಲುವರಾಯಸ್ವಾಮಿ)
ಕೃಷಿ ಸಚಿವರು